ಅಧ್ಯಕ್ಷರು: ಉತ್ತರ ಕೊಡಿ. ಈಗ ಆಲೂಗಡ್ಡೆ ಬೆಳೆಗಾರರ ಬಗ್ಗೆ ಗಮನ ಸೆಳೆದಿದ್ದಾರೆ.

ಶ್ರೀ ಸಿದ್ದರಾಮಯ್ಯ: ಹೇಳಿಕೆ ಮಾಡಿಸಿ, ಉತ್ತರ ಕೊಡಿಸಿ.

ಅಧ್ಯಕ್ಷರು: ಉತ್ತರ ಕೊಟ್ಟಿದ್ದಾರೆ. ನೀವು ನೋಡುವುದಿಲ್ಲ. ಏನೂ ಇಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ನನಗೆ ಕಾಪಿ ಕೊಡಿ.

ಶ್ರೀ ಸಿದ್ದರಾಮಯ್ಯ: ರವೀಂದ್ರನಾಥ್‌ರವರೆ ಉತ್ತರ ಕೊಟ್ಟಿದ್ದಾರೆ.

ಅಧ್ಯಕ್ಷರು : ನೋಡುವುದೇ ಇಲ್ಲ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಮಂತ್ರಿಗಳು ಅದು ಏನೆಂದು ಓದಿ ನಾವು ಸ್ವಲ್ಪ ತಿಳಿದುಕೊಳ್ಳಿ.

ಅಧ್ಯಕ್ಷರು: ಉತ್ತರ ಇದೆ ನೀವು ಹೇಳಿ.

2. ವಿಷಯ: ಆಲೂಗಡ್ಡೆ ಬೆಳೆಗಾರರಿಗೆ ನೇರವಾಗಿ ಐದು ಸಾವಿರ ರೂಪಾಯಿಗಳನ್ನು ನಗದು ರೂಪದಲ್ಲಿ ನೀಡುವ ಬಗ್ಗೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ): ಮಾನ್ಯ ಅಧ್ಯಕ್ಷರೆ, ಪ್ರಸ್ತುತ ಸಾಲಿನಲ್ಲಿ ನಷ್ಟ ಅನುಭವಿಸುತ್ತಿರುವ ಆಲೂಗಡ್ಡೆ ಬೆಳೆಗಾರರಿಗೆ ಪ್ರತಿ ಎಕರೆಗೆ 5ಸಾವಿರಗಳನ್ನು ನಗದು ರೂಪದಲ್ಲಿ ನೀಡುವ ಬಗ್ಗೆ ಮಾನ್ಯ ಕೃಷಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್.ಎ. ರವೀಂದ್ರನಾಥ್ (ತೋಟಗಾರಿಕೆ ಮತ್ತು ಸಕ್ಕರೆ ಸಚಿವರು):– ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಆಲೂಗಡ್ಡೆಯನ್ನು ಹಾಸನ, ಚಿಕ್ಕಮಗಳೂರು, ಬೆಳಗಾವಿ,

ಧಾರವಾಡ, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿದೆ. ಹಾಸನ ಜಿಲ್ಲೆಯು ರಾಜ್ಯದಲ್ಲಿ ಅತ್ಯಂತ ಹೆಚ್ಚು ಪ್ರದೇಶದಲ್ಲಿ ಆಲೂಗಡ್ಡೆ ಬೆಳೆಯುವ ಜಿಲ್ಲೆಯಾಗಿದ್ದು, ಪ್ರತಿ ವರ್ಷ ಋತುಮಾನದ ಸೂಕ್ತತೆ ಅನುಸರಿಸಿ ಸುಮಾರು 20,000–30,000 ಹೆಕ್ಟರ್ ಪ್ರದೇಶದಲ್ಲಿ ಬಿತ್ತನೆ ಮಾಡಲಾಗುತ್ತಿದೆ. ಮುಖ್ಯವಾಗಿ ಖರೀಫ್ ಹಂಗಾಮಿನಲ್ಲಿ ಬೆಳೆಯಲಾಗುವ ಆಲೂಗಡ್ಡೆಯು ಹವಾಮಾನ ವೈಪರೀತ್ಯದಿಂದ ಬೆಳೆನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಹಿನ್ನೆಲೆಯಲ್ಲಿ ಆ ಭಾಗದ ಮಾನ್ಯ ಶಾಸಕರುಗಳ ಕೋರಿಕೆ ಅನ್ವಯ ದಿನಾಂಕ: 19–04–2012 ರಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಆಲೂಗಡ್ಡೆ ಬೆಳೆಗಾರರ ಕುಂದುಕೋರತೆಗಳನ್ನು ನಿವಾರಿಸಲು ಕ್ರಮ ಕೈಗೊಳ್ಳುವ ಬಗ್ಗೆ ತೀರ್ಮಾನಿಸಲಾಗಿದೆ.

ಇದರ ಫಲಶೃತಿಯಾಗಿ ಹಾಸನ ಜಿಲ್ಲೆ ಸಹಿತ ರಾಜ್ಯದ ಎಲ್ಲಾ ಆಲೂಗಡ್ಡೆ ಬೆಳೆಯುವ ಜಿಲ್ಲೆಗಳ ಆಲೂಗಡ್ಡೆ ಬೆಳೆಗಾರರಿಗೆ ನೆರವು ನೀಡಲು ಒಂದು ವಿಶೇಷ ಪ್ಯಾಕೇಜನ್ನು ನೀಡಲು ಸರ್ಕಾರದ ಆದೇಶ ಸಂಖ್ಯೆ:

ತೋಇ: 119 : ತೋಸವಿ: 2012(ಭಾಗ) ದಿ:09–05–2012 ರಂದು ಹೊರಡಿಸಲಾಗಿದೆ. ಇದರನ್ವಯ ಸಂಕಷ್ಟಗೊಳಗಾದ ಆಲೂಗಡ್ಡೆ ಬೆಳೆಗಾರರಿಗೆ ಈ ಕೆಳಕಂಡಂತಿದೆ ನೆರವು ನೀಡಲು ಸರ್ಕಾರವು ಮುಂದಾಗಿದೆ.

ಕ್ರಮ ಸಂಖ್ಯೆ	ಕಾಂಪೊನೆಟ್‌ಗಳು	ಶೇಕಡವಾರು ಸಹಾಯಧನ	ಸಹಾಯಧನ ಒದಗಿಸಬಹುದಾದ ಮೊತ್ತ (ರೂ. ಪ್ರತಿ ಹೆಕ್ಟೇರ್‌ಗೆ)	ಸಹಾಯಧನ ವಿತರಣೆಯ ವಿಧಾನ
1	ಜೈವಿಕ ಗೊಬ್ಬರ ವಿತರಣೆ (ಟ್ರೈಕೊಡರ್ಮಾ (2ಕೆಜಿ), ಸುಡೊಮಾನಾಸ್ (1ಕೆಜಿ)ಪಿ.ಎಸ್.ಬಿ (1ಕೆಜಿ)	ಶೇ.100ರಂತೆ	1,000–00	ಜೈವಿಕ ಗೊಬ್ಬರವನ್ನು ವಿತರಿಸಲಾಗಿದೆ.
2	ಸಸ್ಯ ಸಂರಕ್ಷಣೆ ಔಷಧಿಗಳನ್ನು ಖರೀದಿಸಿದ ರೈತರಿಗೆ ಸಹಾಯಧನ	ಶೇ.50ರಂತೆ	1,000–00	ಹಾಪ್‌ಕಾಮ್ಸ್ ಮುಖಾಂತರ ರೈತರು ಶೇ.50ರ ದರದಲ್ಲಿ ಖರೀದಿ ಮಾಡಿರುತ್ತಾರೆ.
3	ಬೆಳೆ ವಿಮೆಗಾಗಿ ಸಹಾಯಧನ (ಹೆಚ್ಚುವರಿಯಾಗಿ)	ಶೇ.50ರಂತೆ	1,500–00	ನಗದು ರೂಪದಲ್ಲಿ ಬ್ಯಾಂಕ್ ಮೂಲಕ ಪಾವತಿಸಲಾಗಿದೆ
4	ಸಾವಯವ ಗೊಬ್ಬರಗಳು	ಶೇ.50ರಂತೆ	1,500–00	ನಗದು ರೂಪದಲ್ಲಿ ಬ್ಯಾಂಕ್ ಮೂಲಕ ಪಾವತಿಸಲಾಗಿದೆ
		ಒಟ್ಟು	**5,000–00**	

ಇದರಂತೆ, 2012–13ನೇ ಸಾಲಿನಲ್ಲಿ ರಾಜ್ಯದ ಆಲೂಗಡ್ಡೆ ಬೆಳೆಗಾರರಿಗೆ ವಿಶೇಷ ಪ್ಯಾಕೇಜ್ ಅನ್ವಯ ಶೇಕಡ 50 ರಷ್ಟು ಎಂದರೆ ಗರಿಷ್ಟ

ರೂ.5000/–ವರೆಗೆ ಪ್ರತಿ ಹೆಕ್ಟೇರಿಗೆ ಪ್ರತಿ ಫಲಾನುಭವಿಗೆ ಗರಿಷ್ಟ 2 ಹೆಕ್ಟೇರ್ ಪ್ರದೇಶಕ್ಕೆ ಸಹಾಯಧನ ನೀಡುವ ಕಾರ್ಯಕ್ರಮವನ್ನು ತೋಟಗಾರಿಕೆ ಇಲಾಖೆ ವತಿಯಿಂದ ಹಮ್ಮಿಕೊಳ್ಳಲಾಗಿದೆ.

ಪ್ರಸ್ತುತ ಸಾಲಿನ ಮುಂಗಾರು ಹಂಗಾಮಿನಲ್ಲಿ ಬರಗಾಲದ ಪರಿಸ್ಥಿತಿ ಉಂಟಾದ ಕಾರಣ ರಾಜ್ಯದ ಆಲೂಗಡ್ಡೆ ಬೆಳೆಗಾರರಿಗೆ ಸದರಿ ವಿಶೇಷ ಪ್ಯಾಕೇಜ್ ಯೋಜನೆಯಡಿ ಬೆಳೆ ವಿಮೆಗಾಗಿ ನೀಡುವ ಸಹಾಯಧನದ ಅಡಿಯಲ್ಲಿ ಆಲೂಗಡ್ಡೆ ಬಿತ್ತನೆ ಮಾಡದ ರೈತರು ಸಹ ವಿಮಾ ಕಂತನ್ನು ಪಾವತಿಸಿ ಹವಾಮಾನ ಆಧಾರಿತ ವಿಮಾ ಯೋಜನೆಯಲ್ಲಿ ಭಾಗವಹಿಸಿದ್ದಲ್ಲಿ ಅಂತಹ ರೈತರಿಗೂ ಸಹ ತೋಟಗಾರಿಕೆ ಇಲಾಖೆ ವತಿಯಿಂದ ಶೇ. 50 ರಷ್ಟು ವಿಮಾ ಕಂತಿನ ಸಹಾಯಧನವನ್ನು ನಿಯಾಮಾನುಸಾರ ನೀಡಲು ಸರ್ಕಾರ ಆದೇಶ ಸಂಖ್ಯೆ: ತೋಇ:119:ತೋಸವಿ:2012(ಭಾಗ), ದಿ:22–12–2012ದಲ್ಲಿ ಅವಕಾಶ ಕಲ್ಪಿಸಲಾಗಿದೆ.

ನಮ್ಮ ಯೋಜನೆಯಡಿ ಹಾಸನ ಜಿಲ್ಲೆಯಲ್ಲಿ ಸುಮಾರು 13,000 ಹೆಕ್ಟೇರ್ ಪ್ರದೇಶದಲ್ಲಿ ಆಲೂಗಡ್ಡೆ ಬಿತ್ತನೆಯಾಗಿದ್ದು, ಸುಮಾರು 38,542 ರೈತರುಗಳಿಗೆ (ಬಿತ್ತನೆ ಮಾಡಿದ ಹಾಗೂ ಬಿತ್ತನೆ ಮಾಡದ ರೈತರು) ಆಲೂಗಡ್ಡೆ ವಿಶೇಷ ಪ್ಯಾಕೇಜ್ ಸೌಲಭ್ಯ ನೀಡಲಾಗಿದೆ. ಈವರೆಗೆ ರೂ. 7 ಕೋಟಿಗಳ ನೆರವು ವಿತರಿಸಲಾಗಿದ್ದು, ನಗದು ರೂಪದಲ್ಲಿ ನೀಡಲಾಗುತ್ತಿಲ್ಲ. ವಿಮಾ ಕಂತನ್ನು 38,542 ರೈತರು ಪಾವತಿಸಿದ್ದು ರೂ. 4.96 ಕೋಟಿಗಳ ವಿಮಾ ಪರಿಹಾರವನ್ನು ಕೃಷಿ ವಿಮಾ ಕಂಪನಿ (Agricuiture Insurance

company) ವತಿಯಿಂದ ಸಹ ಪಾವತಿಸಲಾಗಿದೆ. ಉಳಿದಂತೆ ಇತರೆ ಜಿಲ್ಲೆಗಳ ವಿವರ ಈ ಕೆಳಕಂಡಂತಿದೆ.

ಜಿಲ್ಲಾವಾರು ಅಗತ್ಯವಿರುವ ಅನುದಾನದ ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರಮ ಸಂಖ್ಯೆ	ಜಿಲ್ಲೆ ಸಹಾಯಧನ ಒದಗಿಸ ಬಹುದಾದ ಪ್ರದೇಶ (ಹೆಕ್ಟೇರ್‌ಗಳಲ್ಲಿ)	ಆರ್ಥಿಕ ನೆರವು ರೂ. 5,000/ಹೆಕ್ಟೇರ್ (ರೂ.ಲಕ್ಷಗಳಲ್ಲಿ)	ಭೌತಿಕ ಸಾಧನೆ (ಹೆಕ್ಟರ್‌ಗಳಲ್ಲಿ)	ಜನವರಿ ಅಂತ್ಯದವರೆಗೆ ಆರ್ಥಿಕ ಸಾಧನೆ (ರೂ. ಲಕ್ಷಗಳಲ್ಲಿ)
1.	ಹಾಸನ 20,000	1,000.00	13000	701.431
2.	ಬೆಳಗಾಂ 2,000	100.00	1600	29.99
3.	ಧಾರವಾಡ 500	25.00	422	10.42
4.	ಚಿಕ್ಕಮಗಳೂರು 2,500	125.00	2078	63.36
	ಒಟ್ಟು	**1250.00**	**17100**	**805.201**

ಅಧ್ಯಕ್ಷರು: ನಿಮಗೆ ಉತ್ತರ ಸಿಕ್ಕತೆ? ನೀವು ಕ್ಲಾರಿಫಿಕೇಷನ್ ಕೇಳಿಬಿಡಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಸಚಿವರೆ ಇಂದು ಆಲೂಗಡ್ಡೆ ಬೆಳೆಯುವ ರೈತರಿಗೆ ಸುಮಾರು 500–600 ಕೋಟಿ ನಷ್ಟವಾಗಿರುವುದು ತಮಗೆ ಗೊತ್ತಿದೆ. ಈಗ ತಾವು ಏನು ಮಾಡಿದಿರಿ, ಐದು ಸಾವಿರ ರೂಪಾಯಿ ಎಂದು ಅದನ್ನು ಭಿಕ್ಷುಕರಿಗೆ ಕೊಟ್ಟ ಹಾಗೆ ಕೊಡುತ್ತಿದ್ದೀರಿ. ಒಂದು ಎಕರೆ ಆಲೂಗಡ್ಡೆಗೆ ಕನಿಷ್ಠ ಇವತ್ತು 30 ರಿಂದ 40 ಸಾವಿರ ರೂಪಾಯಿಗಳು ಖರ್ಚಾಗುತ್ತಿವೆ. ನೀವು ಕೊಡುವುದು ಎಷ್ಟು? ಮಾನ್ಯ ಉಮೇಶ್ ಕತ್ತಿಯವರು ಇಲ್ಲಿಯೇ ಇದ್ದಾರೆ. ಬೆಳಗಾವಿ ಜಿಲ್ಲೆಯಲ್ಲಿಯೂ ಆಲೂಗಡ್ಡೆ ಬೆಳೆಯುತ್ತಾರೆ. ಅವರು ಪಾಪ ತೋಟಗಾರಿಕೆ ಮಂತ್ರಿಗಳಾಗಿದ್ದಾಗ ಮಾಡಿ ಹೋಗಿದ್ದರು. ಐದು ಸಾವಿರ ರೂಪಾಯಿಗಳನ್ನು ನೇರವಾಗಿ ಕೊಡುವುದಕ್ಕೆ ಇವರಿಗೆ ಏನು ತೊಂದರೆ? ಎರೆಹುಳು ಗೊಬ್ಬರ ತೆಗೆದುಕೊಳ್ಳಿ ಎಂದು ಕೊಡುತ್ತೀರಿ, ಆದರೆ ಇವತ್ತು ಯಾರು ಸ್ವಾಮಿ ಎರೆಹುಳುವಿಗೆ ಗೊಬ್ಬರ ಹುಡಿಕಿಕೊಂಡು ಹೋಗುತ್ತಾರೆ? ಐದು ಸಾವಿರ ರೂಪಾಯಿಗಳನ್ನು ನೇರವಾಗಿ ಕೊಡಿ. ನೀವು ಕೊಡುತ್ತೇವೆಂದು ಪ್ಯಾಕೇಜ್ ಘೋಷಣೆ ಮಾಡಿದ್ದೀರಿ. ರೈತರಿಗೆ ಐದು ಸಾವಿರ ಕೊಡುವುದಕ್ಕೆ ಏನು ತೊಂದರೆ? ಎರೆಹುಳ ಪರೆಹುಳ ಅವು ಯಾವು ನಮಗೆ ಬೇಡ. ನೇರವಾಗಿ ಐದು ಸಾವಿರ ರೂಪಾಯಿ ದುಡ್ಡನ್ನು ರೈತರಿಗೆ ಕೊಡಿ. ವರ್ಷಕ್ಕೆ 40 ಸಾವಿರ ರೂಪಾಯಿಯಂತೆ ಒಂದು ಎಕರೆಗೆ ನಾಲ್ಕು ವರ್ಷದಿಂದ ನಷ್ಟವಾಗಿದೆ ಸ್ವಾಮಿ. ದಯಮಾಡಿ ತಾವು ಹೇಳಿ, ಇಲ್ಲದೇ ಹೋದರೆ ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸಿ.

ಶ್ರೀ ಎಸ್.ಎ. ರವೀಂದ್ರನಾಥ್ : ಸದನ ಮುಗಿದ ಮೇಲೆ ಅವರನ್ನು ಕರೆದು ಯಾವ್ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ನಷ್ಟವಾಗಿದೆ ಎಂದು ಚರ್ಚೆ ಮಾಡೋಣ.

ಶ್ರೀ ಹೆಚ್.ಡಿ.ರೇವಣ್ಣ: ಚರ್ಚೆ ಬೇಡ ಸ್ವಾಮಿ. ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳ ಕಡೆಯಿಂದ ಈ ಬಗ್ಗೆ ಉತ್ತರ ಕೊಡಿಸಿ, ಇಲ್ಲವೆಂದರೆ ನಾನು ಇಲ್ಲಿ ಧರಣಿ ಕುಳಿತುಕೊಳ್ಳಬೇಕಾಗುತ್ತದೆ.

ಶ್ರೀ ಎಸ್.ಎ. ರವೀಂದ್ರನಾಥ್: 15 ನೇ ತಾರೀಖು ಅದ ಮೇಲೆ ಅವರನ್ನೇ ಕರೆದು ಈ ಬಗ್ಗೆ ಚರ್ಚೆ ಮಾಡಿ ಯಾವ ರೀತಿ ಮಾಡಬೇಕೆಂದು ತೀರ್ಮಾನ ಮಾಡೋಣ.

ಶ್ರೀ ಹೆಚ್.ಡಿ.ರೇವಣ್ಣ: ಚರ್ಚೆ ಬೇಡ ಸ್ವಾಮಿ. ಚರ್ಚೆ ಮಾಡಿ ಸಾಕಾಗಿದೆ. ಈಗ ಮೂರು ಜನ ಮುಖ್ಯಮಂತ್ರಿಗಳು ಹೋಗಿದ್ದಾರೆ.

ಅಧ್ಯಕ್ಷರು: ಈಗ ಅವರು ಚರ್ಚೆ ಮಾಡಿ ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ: ನಾನು ಈಗ ಧರಣಿ ಕುಳಿತುಕೊಳ್ಳಬೇಕಾಗುತ್ತದೆ. ನಾಳೆ ಬೆಳಿಗ್ಗೆ ಮುಖ್ಯಮಂತ್ರಿಗಳಿಂದ ಹೇಳಿಕೆ ಕೊಡಿಸಿ. ಇಲ್ಲವೆಂದರೆ ನಾವು ಇಲ್ಲಿಯೇ ಮಲಗಿಕೊಳ್ಳುತ್ತೇವೆ. ಐದು ಸಾವಿರ ಕೊಡುವುದಕ್ಕೂ ಒಳ್ಳೆಯ ಭಿಕ್ಷುಕರು ಬೇಡಿದ ಹಾಗೆ ಆಗಿದೆ. ಎರೆಹುಳದ್ದು ರೂ. 1,500/– ತೆಗೆದುಕೊಳ್ಳಿ, ಔಷಧಿಯದ್ದು ರೂ. 1,500/– ತೆಗೆದುಕೊಳ್ಳಿ ಎಂದೆ ಹೇಗೆ?

ಶ್ರೀ ಎಸ್.ಎ. ರವೀಂದ್ರನಾಥ್ ಆ ಭಾಗದಲ್ಲಿ ಯಾರ್ಯಾರು ಆಲೂಗಡ್ಡೆ ಬೆಳೆಯುತ್ತಾರೆ ಅವರನ್ನು ಕರೆದು ಚರ್ಚೆ ಮಾಡುತ್ತೇನೆಂದು ಹೇಳಿದ್ದೇನೆ.

ಶ್ರೀ ಹೆಚ್.ಡಿ.ರೇವಣ್ಣ: ಚರ್ಚೆ ಬೇಡ ಸ್ವಾಮಿ. ಬೆಳಿಗ್ಗೆ ಮುಖ್ಯಮಂತ್ರಿಗಳಿಂದ ಹೇಳಿಕೆ ಕೊಡಿಸಿ.

ಅಧ್ಯಕ್ಷರು: ಇದು ಗಮನ ಸೆಳೆಯುವ ಸೂಚನೆ ನೀವು ಹಾಗೆ ಹೇಳಿದರೆ ಹೇಗೆ?

ಶ್ರೀ ಉಮೇಶ್ ವಿ.ಕತ್ತಿ: ಆಲೂಗಡ್ಡೆ ಬೆಳೆಗಾರರಿಗೆ ತೊಂದರೆಯಾಗಿದೆ ಇವರಿಗೆ ಪರಿಹಾರ ಕೊಡಬೇಕೆಂದು ಮಾನ್ಯ ಹಿರಿಯ ಸದಸ್ಯರಾದ ರೇವಣ್ಣನವರು ಮೇಲಿಂದ ಮೇಲೆ ಮನವಿ ಮಾಡಿದಾಗ, ಮಾನ್ಯ ಸದಾನಂದಗೌಡರವರು ಮುಖ್ಯಮಂತ್ರಿ ಇದ್ದಾಗ ಇದಕ್ಕೊಂದು ಪ್ಯಾಕೇಜ್ ಮಾಡಬೇಕೆಂದು ತೀರ್ಮಾನಿಸಿ ಆ ಸಂದರ್ಭದಲ್ಲಿ ಇವರ ಸಲಹೆ ಪಡೆದು ಆ ಭಾಗದ ರೈತರ ಸಲಹೆ ಪಡೆದು ಒಂದು ಪ್ಯಾಕೇಜ್ ಮಾಡಲಾಯಿತು. ಈಗ ನೇರವಾಗಿ ಹಣ ಕೊಡಿ ಎಂದರೆ, ಆ ಹಣ ಮತ್ತೆ ಅದು ಕೃಷಿಗೆ ಉಪಯೋಗವಾಗುವುದಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ: ಪ್ಯಾಕೇಜ್ ಎರೆಹುಳಕ್ಕಾಗಿ ಯಾವನೋ ದುಡ್ಡು ಹೊಡೆಯುವುದಕ್ಕಾ? ಐದು ಸಾವಿರ ನೇರವಾಗಿ ಕೊಡಿ.

ಶ್ರೀ ಉಮೇಶ್ ವಿ.ಕತ್ತಿ: ರೈತ ಬಿತ್ತನೆ ಮಾಡುವಾಗ ಬೀಜ, ಗೊಬ್ಬರ, ಪೆಸ್ಟಿಸೈಡ್ಸ್, ಕೊಡಬೇಕೆನ್ನುವ ಉದ್ದೇಶದಿಂದ ಈ ಪ್ಯಾಕೇಜ್‌ನ್ನು ಮಾಡಲಾಯಿತು.. ಈಗ ರೇವಣ್ಣನವರು ನೇರವಾಗಿ ದುಡನ್ನು ಕೊಡಿ ಎಂದು

ಕೇಳಿದರೆ ಇದು ಸರಿಯಾಗಿ ಆಗಲಿಕ್ಕಿಲ್ಲ. ಏನು ರೈತರಿಗೆ ತೊಂದರೆಯಾಗುತ್ತದೆ ಆ ತೊಂದರೆ ಪರಿಹರಿಸುವ ಜವಾಬ್ದಾರಿ ಸರ್ಕಾರದ್ದು ಎಂದು ಹೇಳಬಯಸುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ:– ಮಾನ್ಯ ಅಧ್ಯಕ್ಷರೆ, ನಾಳೆ ದಿವಸ ಇದೇ ವಿಚಾರ ಇಟ್ಟುಕೊಂಡು ಧರಣಿ ಕುಳಿತುಕೊಳ್ಳುತ್ತೇವೆ.

ಅಧ್ಯಕ್ಷರು:– ತಾವು ಇದರ ಬಗ್ಗೆ ಚರ್ಚೆ ಮಾಡಿ. ಈ ರೀತಿಯಾದರೆ ಹೇಗೆ? ಇದು ಗಮನ ಸೆಳೆಯುವ ಸೂಚನೆಯಾಗಿದೆ.

ಶ್ರೀ ಹೆಚ್.ಡಿ.ರೇವಣ್ಣ:– ಮಾನ್ಯ ಅಧ್ಯಕ್ಷರೆ, ಪ್ಯಾಕೇಜ್ ಎಂದು 5,000 ರೂಪಾಯಿ ಕೊಟ್ಟ ಮೇಲೆ ಅದರಲ್ಲಿ ಎರೆಹುಳುವಿಗೆ ರೂ. 1,500 ಬೆಳೆ ವಿಮೆಗಾಗಿ 1,500 ರೂಪಾಯಿಯಂತೆ 5,000 ರೂಪಾಯಿಯನ್ನು ಹಂಚಿಕೆ ಮಾಡಿದ್ದಾರೆ. ಅದರ ಬದಲು ಪ್ಯಾಕೇಜ್ ಕೊಡುವುದಾದರೆ ರೈತರಿಗೆ 5,000 ರೂಪಾಯಿಯನ್ನು ನೇರವಾಗಿ ಕೊಡಿ. ಇದರ ಬಗ್ಗೆ ನಾಳೆ ಬೆಳಿಗ್ಗೆ ಚರ್ಚೆ ಮಾಡೋಣ. ಮಾನ್ಯ ಉಮೇಶ್‌ಕತ್ತಿಯವರಿಗೆ ಕಬ್ಬು ಮತ್ತು ತೋಟಗಾರಿಕೆ ಬಗ್ಗೆ ಮಾತ್ರ ಗೊತ್ತಿದೆ.

ಶ್ರೀ ಎಸ್.ಎ. ರವೀಂದ್ರನಾಥ್:– ಮಾನ್ಯ ಉಮೇಶ್ ಕತ್ತಿಯವರು ತೋಟಗಾರಿಕೆ ಇಲಾಖೆಯ ಸಚಿವರಾಗಿ ಕೆಲಸ ಮಾಡಿರುವುದರಿಂದ ಈ ಬಗ್ಗೆ ಅವರಿಗೆ ಅನುಭವ ಇರುವುದರಿಂದ ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಉಮೇಶ್ ವಿ.ಕತ್ತಿ:– ಮಾನ್ಯ ಅಧ್ಯಕ್ಷರೆ, ಬೆಳೆ ನಷ್ಟವಾಗಿರುವುದರಿಂದ ಇವತ್ತಿನ ದಿವಸ ರೈತರಿಗೆ ಪ್ಯಾಕೇಜ್ ಅನ್ನು ಕೊಡುತ್ತಿದ್ದೇವೆ.

ಶ್ರೀ ಹೆಚ್.ಡಿ.ರೇವಣ್ಣ:– ಪ್ಯಾಕೇಜ್ ಮಾಡಿರುವುದರಿಂದ ಮಾನ್ಯ ಸದಾನಂದ ಗೌಡರು ಮನೆಗೆ ಹೋದರು ಎಂದು ಕಳೆದ ಸಲ ನೀವೇ ಹೇಳಿದ್ದೀರಿ.

(ಗೊಂದಲ)

ಶ್ರೀ ಉಮೇಶ್ ವಿ.ಕತ್ತಿ:– ರೈತ ಬಿತ್ತನೆ ಮಾಡುವುದಕ್ಕೆ ಅನುಕೂಲವಾಗಲೆಂದು ಉದ್ದೇಶದಿಂದ ಈ ರೀತಿಯಾಗಿ ಪ್ಯಾಕೇಜ್ ನೀಡಲಾಗಿದೆ. ಆದ್ದರಿಂದ, ಯಾವುದೇ ಬೆಳೆಗೆ ನೇರವಾಗಿ ಹಣ ಕೊಡತಕ್ಕಂಥ ಕಾರ್ಯಕ್ರಮ ಸರ್ಕಾರದ ಮುಂದೆ ಇಲ್ಲ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ:– ನಿಮಗೆ ಕೊಡುವುದಕ್ಕಾದರೆ ಕೊಡಿ ಅಥವಾ ಕೊಡುವುದಕ್ಕೆ ಆಗದೆ ಇದ್ದರೆ ದಯಮಾಡಿ ಕೊಡುವುದೇ ಬೇಡ. ಇದರ ಬಗ್ಗೆ ಬೆಳಿಗ್ಗೆ ಉತ್ತರ ಕೊಡಿಸದಿದ್ದರೆ ನಾವು ಧರಣಿ ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು:– ಆಯಿತು. ಚರ್ಚೆ ಮಾಡುತ್ತೇನೆಂದು ಅವರು ಹೇಳಿದ್ದಾರೆ.

ಶ್ರೀ ಹೆಚ್.ಡಿ.ರೇವಣ್ಣ:– ಮಾನ್ಯ ಅಧ್ಯಕ್ಷರೆ, ಇದಕ್ಕೆ ಉತ್ತರ ಕೊಡಿಸದಿದ್ದರೆ ನಾಳೆ ಬೆಳಿಗ್ಗೆ ಸದನದ ಬಾವಿಗೆ ಬಂದು ಧರಣಿ

ಕುಳಿತುಕೊಳ್ಳುತ್ತೇನೆ. ಏಕೆಂದರೆ, ಶಾಂತ ರೀತಿಯಿಂದ ಸದನ ನಡೆಸುವುದಕ್ಕೆ ನಾವು ಅವಕಾಶ ಕೊಡುತ್ತಿದ್ದೇವೆ.

ಅಧ್ಯಕ್ಷರು:– ನೀವು ಸಹಕಾರ ಕೊಡಿ. ಚರ್ಚೆ ಮಾಡಿ ಉತ್ತರ ಹೇಳಿ.

ಶ್ರೀ ಹೆಚ್.ಡಿ.ರೇವಣ್ಣ:– ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ ನಾಳೆ ದಿವಸ ಉತ್ತರ ಕೊಡಿ.

ಶ್ರೀ ಎಸ್.ಎ. ರವೀಂದ್ರನಾಥ್:– ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಹೇಳಿದಂತೆ 15ನೇ ತಾರೀಖಿನ ನಂತರ ಅವರನ್ನು ಕರೆದು ಚರ್ಚೆ ಮಾಡಿ ಎಲ್ಲೆಲ್ಲಿ ಏನೇನು ಮಾಡಬೇಕೆಂಬುದರ ಬಗ್ಗೆ ಒಂದು ತೀರ್ಮಾನಕ್ಕೆ ಬರುತ್ತೇವೆ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ:– 15ನೇ ತಾರೀಖಿನವರೆಗೆ ಬೇಡ. ನೀವು ಮಾನ್ಯ ಮುಖ್ಯಮಂತ್ರಿಯವರ ಜೊತೆ ಚರ್ಚೆ ಮಾಡಿ ನಾಳೆ ಉತ್ತರ ಹೇಳಿ.

ಅಧ್ಯಕ್ಷರು:– ಸಹಕಾರ ಮಾಡಿ ಎಂದು ಕೇಳಿಕೊಳ್ಳುತ್ತಿದ್ದಾರೆ. ನೀವು ಅಷ್ಟು ಸಹಕಾರ ಮಾಡದಿದ್ದರೆ ಹೇಗೆ?

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ:– ನಾಳೆ ಬೆಳಿಗ್ಗೆ ಉತ್ತರ ಕೊಡಿಸಿ. ಇಲ್ಲದಿದ್ದರೆ ನಾವು ಧರಣಿಗೆ ಹೋಗುತ್ತೇವೆ. ನಾಳೆ ದಿವಸ ತಾವು ಏನು ಹೇಳುವುದಕ್ಕೆ ಹೋಗಬೇಡಿ.

ಅಧ್ಯಕ್ಷರು:–ಆಯಿತು.